(ಮಾನ್ಯ ಬಿ.ಆರ್. ಪಾಟೀಲ್‌ರವರು ಸದನದಲ್ಲಿ ಹಾಜರಿರಲಿಲ್ಲ)

4. ವಿಷಯ: ತುಂಗಭದ್ರಾ ನದಿಯ ಬಲದಂಡೆಯ ನದಿ ಪಾತ್ರದಿಂದ ಗದಗ ಬೆಟಗೇರಿ ಅವಳಿನಗರಕ್ಕೆ ನೀರು ಪೂರೈಕೆ ಸ್ಥಗಿತಗೊಂಡಿರುವ ಬಗ್ಗೆ.

*****

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಧಾರವಾಡ ಕೇಂದ್ರ):- ಮಾನ್ಯ ಅಧ್ಯಕ್ಷರೆ, ಗದಗ ಬೆಟಗೇರಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ದೊಡ್ಡ ಪ್ರಮಾಣದಲ್ಲಿ crisis ಆಗಿದೆ.

ಅಧ್ಯಕ್ಷರು:- ಗದಗದಲ್ಲಿ ಆಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್:- ಗದಗ ಬೆಟಗೇರಿ ಅವಳಿ ನಗರದಲ್ಲಿ ಆಗಿದೆ.

ಅಧ್ಯಕ್ಷರು:- ಅಲ್ಲೆಲ್ಲಾ ನೀರಿನ ಕೊರತೆ ಆಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಅಲ್ಲಿಗೆ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಉಸ್ತುವಾರಿ ಮಂತ್ರಿಗಳಾಗಿದ್ದಾರೆ. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇಡೀ ರಾಜ್ಯಕ್ಕೆ ಶುದ್ಧ ನೀರಿನ ಘಟಕಗಳನ್ನು ಹಾಕಿದಂಥವರು, 15 days ಗೆ ಒಮ್ಮೆ water supply ಇದೆಯೆನ್ನುವಂಥದ್ದು, ನಿನ್ನೆ ದಿವಸ ಒಂದು delegation ಬಂದು ನನಗೆ ಒಂದು ಮನವಿ ಪತ್ರವನ್ನು ಕೊಟ್ಟರು. ಮತ್ತೆ ಅವರು ಮನವಿ ಪತ್ರವನ್ನು ಕೊಡುವ ಸಂದರ್ಭದಲ್ಲಿ ಈ ಸಾರಿ 30 days ಗೊಮ್ಮೆ water supply ಇದೆ ಮತ್ತು 15 days ಗೊಮ್ಮೆ compulsory water supply ಇದೆಯೆಂದು ಹೇಳಿದರು. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇರುವಂಥ ಕ್ಷೇತ್ರದಲ್ಲಿ ಏಕೆ ಈ ರೀತಿ ಆಯಿತೆಂದು ನಾನು ಗಾಬರಿಯಾಗದೆ. ಅಲ್ಲಿ ಅವರು ಎರಡು point ಗಳನ್ನು ಹೇಳಿದರು. 3 ತಿಂಗಳಿನಿಂದ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿದೆ. ಮತ್ತು ಇನ್ನೊಂದು ಕಾರಣವೆಂದರೆ ಡಂಬಳ Pump House ಹಿಂಭಾಗದಲ್ಲಿ pipe

ಒಡೆದು ಹಾನಿಯಾಗಿದೆ, ಹಾಗಾಗಿ ನೀರು ಸರಬರಾಜು ಆಗುತ್ತಿಲ್ಲ ಎಂದು ಹೇಳಿದರು. ಇದಕ್ಕೆ ಬೇರೆ ಕಾರಣವಿದೆಯೇ, ಏನು ಎನ್ನುವುದನ್ನು ರಾಜ್ಯ ಸರ್ಕಾರ ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು:– ಅಲ್ಲಿ ನಕ್ಸಲೈಟ್‌ಗಳೇನಾದರೂ ಬಂದಿದ್ದಾರೆಯೇ ಎಂದು ನೋಡಿ.

ಶ್ರೀ ಜಗದೀಶ್ ಶೆಟ್ಟರ್:– ಗದಗ್–ಬೆಟಗೇರಿಯಲ್ಲಿ ನೀರಿನ ಕೊರತೆ ಆಗಲೇಬಾರದು. ಹೆಚ್.ಕೆ. ಪಾಟೀಲರು ಆ ಕ್ಷೇತ್ರದ ಶಾಸಕರೂ ಹೌದು. ಹಾಗಾಗಿ ಅಲ್ಲಿ ನೀರಿನ ಸಮಸ್ಯೆ ಆಗಲೇಬಾರದು. ಅದು ಆಗದ ರೀತಿಯಲ್ಲಿ ಅವರು ಕ್ರಮವನ್ನು ಕೈಗೊಳ್ಳಬೇಕು ಎಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ. ಅದಕ್ಕಾಗಿ, ಇದಕ್ಕೆ ಅವರೇ ಉತ್ತರ ಕೊಟ್ಟರೆ ಬಹಳ ಚೆನ್ನಾಗಿರುತ್ತದೆ. ಗದಗ್–ಬೆಟಗೇರಿ ಕುಡಿಯುವ ನೀರಿನ ಸಮಸ್ಯೆ ಏನಿದೆ, crisis ಏನಿದೆ, ದಯವಿಟ್ಟು ಅದನ್ನು ನಿವಾರಣೆ ಮಾಡಬೇಕು ಎನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ತಮಗೆ ನೀಡಿರುವ ಸೂಚನೆಯಲ್ಲಿ ಸಹ ವಿವರವಾಗಿ ಕಾರಣಗಳನ್ನು ಹೇಳಿದ್ದಾರೆ. ಅಲ್ಲಿ ಕಳೆದ ಮೂರು ತಿಂಗಳಿಂದ ವಿದ್ಯುತ್ ಸರಬರಾಜಿನಲ್ಲಿ ಸಾಕಷ್ಟು ತೊಂದರೆಯಾಗುತ್ತಿದೆ. ಅದರ ಜೊತೆಗೆ, ಡಂಬಳ Pump House ಹತ್ತಿರ ಒಂದು pipe burst ಆಗಿದೆ. ನಮ್ಮಲ್ಲಿ ನೀರು ಕೊನೆಯ ಪಾಳೆಯವನ್ನು ಮುಟ್ಟಬೇಕೆಂದರೆ 27–28 ದಿವಸವಾದದ್ದೂ ನಿಜ. ಹಾಗಾಗಿ, ಗದಗಿನ ಕುಡಿಯುವ ನೀರಿನ ಸರಬರಾಜಿನಲ್ಲಿ ಬಹಳಷ್ಟು ತೊಂದರೆಯಾಗಿದೆ. ಅಲ್ಲಿನ ಜನರಿಗೂ ಬಹಳ ಅನಾನುಕೂಲವಾಗಿದೆ. ಆದಾಗ್ಯೂ ಗದಗ್ ಮುನಿಸಿಪಾಲಿಟಿಯವರು ಟ್ಯಾಂಕರುಗಳ ಮೂಲಕ ನೀರು ಪೂರೈಕೆ ಮಾಡುತ್ತಿದ್ದಾರೆ. ಆದರ ತಮಗಲ್ಲ ಗೂತ್ತಿರುವ ಹಾಗ ದೂಡ್ಡ ಪಟ್ಟಣಕ್ಕ ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಮಾಡಲು ಎಷ್ಟು ಪ್ರಯತ್ನ ಮಾಡಿದರೂ ಕೂಡ ಅದರಿಂದ ಸಮಾಧಾನ ಮಾಡಿಸಲು

ಸಾಧ್ಯವಾಗುವುದಿಲ್ಲ. ಈಗ ರಿಪೇರಿ ಮಾಡಿ ಮತ್ತೆ ಪ್ರಾರಂಭ ಮಾಡಿದ್ದೇವೆ. ಅದರೆ ಇದು ಸುಮಾರು 30 ವರ್ಷಗಳ ಹಿಂದಿನ ಯೋಜನೆ. ಹಾಗಾಗಿ ಒಂದು ಕಡೆ pipe ರಿಪೇರಿ ಮಾಡಿದರೆ ಇನ್ನೆಂಟು ದಿನಗಳೊಳಗಾಗಿ ಮತ್ತೊಂದು ಕಡೆ pipe burst ಆಗಿರುತ್ತದೆ. ಆ ರೀತಿಯ ಪರಿಸ್ಥಿತಿ ಇದೆ. ಆದರೆ 2nd Phase ಅನ್ನು ಬೇಗ ಮುಗಿಸಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ. ಆ ದಿಕ್ಕಿನಲ್ಲಿ ಪ್ರಯತ್ನ ಮತ್ತು ಕೆಲಸ ನಡೆದಿದೆ. ಏತನ್ಮಧ್ಯೆ K.U.W.S.B. ಅಧ್ಯಕ್ಷರಾಗಿರುವಂಥ ಮಾನ್ಯ ಚಂದ್ರಶೇಖರ್‌ರವರಿಗೆ ಅಲ್ಲಿ ನಡೆದಿರುವಂಥ ಒಟ್ಟು ಪರಿಸ್ಥಿತಿಯನು ಹೇಳಿದ್ದೇವೆ. ನಿರ್ಲಕ್ಷ್ಯ ಮಾಡಿದಂಥ ಅಧಿಕಾರಿಗಳ್ಯಾರಿದ್ದರು, ಅವರ ಮೇಲೆ ಕ್ರಮ ವಹಿಸಿದ್ದಾರೆ. ಹಾಗೂ ರಿಪೇರಿಗೆ ಏನೇನು ಕ್ರಮ ಬೇಕೋ ಅದನ್ನು ಮಾಡಿದ್ದಾರೆ. ಈಗ ಸದ್ಯಕ್ಕೆ ನೀರು ಸರಬರಾಜು ಸರಿಯಾಗಿ ನಡೆದಿದೆ. ಕಳೆದ ಐದು ದಿವಸಗಳಿಂದ ಪ್ರತಿ ದಿವಸ ಸರಾಸರಿ 10 million liter ನೀರು ಸರಬರಾಜಾಗುತ್ತಿದೆ. ರಿಪೇರಿ ಕೆಲಸ ಮೇಲಿಂದ ಮೇಲೆ ಬರುತ್ತಿರುವುದರಿಂದ ಅಲ್ಲಿ ತೊಂದರೆಯಾಗಿರುವುದು ಸತ್ಯ. ಎಷ್ಟು ಸಾಧ್ಯವೋ ಅಷ್ಟು ರಿಪೇರಿಯನ್ನು ಸರಿ ಮಾಡುತ್ತಾ ಅಲ್ಲಿ ಸರಿಯಾಗಿ ನೀರು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:– ಅಲ್ಲಿ ಕುಡಿಯುವ ನೀರಿಗೆ ಬಹಳ ದೊಡ್ಡ crisis ಇರುವುದನ್ನು ಕಳೆದ ಹಲವಾರು ತಿಂಗಳಿಂದ ನಾನು ನೋಡುತ್ತಿದ್ದೇನೆ. ಅದಕ್ಕಾಗಿ, ಒಂದು time bound ಒಳಗೆ ನಿರಂತರವಾಗಿ ನೀರು ಸರಬರಾಜಾಗುವಂತೆ ಆಗಬೇಕು. Pipeline ಒಡೆಯುತ್ತಿದೆ, ಮತ್ತೊಂದು ಸಮಸ್ಯೆಯಾಗುತ್ತಿದೆ ಎಂದರೆ ಅದಕ್ಕೆ ಏನಾದರೊಂದು solution ಹುಡುಕಬೇಕಲ್ಲವೇ? ಅಲ್ಲಿ ಹದಿನೈದು ದಿವಸಕ್ಕೊಮ್ಮೆ ನೀರು ಸರಬರಾಜಾಗುತ್ತಿದೆ. ನೀವೇ ಹೇಳಿದ ಪ್ರಕಾರ 28 ದಿವಸಗಳಿಗೊಮ್ಮೆ ನೀರು ಸರಬರಾಜು ಆಗುತ್ತಿದೆ. ಅಂದರೆ ಅಲ್ಲಿ ಎಷ್ಟು ಗಂಭೀರವಾದಂಥ ಪರಿಸ್ಥಿತಿ ಇದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಒಂದು time bound ನಲ್ಲಿ ಕೆಲಸವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ಅಧ್ಯಕ್ಷರೆ, 2nd Phase ಅನ್ನು ಬಹಳ ಬೇಗ ಪೂರ್ಣಗೊಳಿಸಬೇಕು ಎಂದು ನಾವು ಎಲ್ಲ ರೀತಿಯ ಪ್ರಯತ್ನ ನಡೆಸಿದ್ದೇವೆ. ಯುದ್ಧೋಪಾದಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಮ್ಮ ಅಧಿಕಾರಿಗಳ ಹೇಳಿಕೆಯ ಪ್ರಕಾರ, ನಾಲ್ಕು ತಿಂಗಳೊಳಗಾಗಿ ನಾವು 2nd Phase ಅನ್ನು ಪೂರ್ಣಗೊಳಿಸಬಹುದು ಎನ್ನುವಂಥ ವಿಶ್ವಾಸ ಮೂಡಿದೆ. ಆದಾಗ್ಯೂ ಅದಕ್ಕೆ ಏನು ಒತ್ತಡ ಬೇಕೋ, ಆ ಒತ್ತಡವನ್ನು ನಾವು ಹಾಕುತ್ತೇವೆ, ಹಾಗೂ ಈಗ ರಿಪೇರಿ ಕೆಲಸಗಳನ್ನು ಮಾಡುತ್ತಾ ಈ ನಾಲ್ಕೈದು ತಿಂಗಳು ಏನೂ ತೊಂದರೆಯಾಗದ ಹಾಗೆ ಏನು ಮಾಡಬೇಕೋ ಆ ಪ್ರಯತ್ನಗಳನ್ನು ಮಾಡುತ್ತೇವೆ. ಜಗದೀಶ ಶೆಟ್ಟರ್‌ರವರೇ, ತಮಗೆ ಗೊತ್ತಿದೆ, ಹಳೆಯ scheme ಗಳಲ್ಲಿ ಏನಾಗುತ್ತದೆ ಎಂದರೆ, ಹುಬ್ಬಳ್ಳಿ–ಧಾರವಾಡದಲ್ಲಿ ಒಂದು ಸಂದರ್ಭದಲ್ಲಿ ಹತ್ತು ದಿವಸಲ್ಲ, ಹನ್ನೆರಡು ದಿವಸಕ್ಕೊಮ್ಮೆ ನೀರು ಕೊಟ್ಟರೆ ಸಾಕು ಎನ್ನುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಅದೇ ಪರಿಸ್ಥಿತಿ ಇವತ್ತು ಗದಗ್‌ನಲ್ಲೂ ಹಳೆಯ scheme ನಿಂದಾಗಿ ಆಗಿದೆ. ಆದರೂ ಸಹ ನಾವು ಇದಕ್ಕೆ ಏನು ಮಾಡಲು ಸಾಧ್ಯವೋ ಆ ಎಲ್ಲ ಪ್ರಯತ್ನಗಳನ್ನು ಮಾಡುತ್ತೇವೆ.

ಅಧ್ಯಕ್ಷರು:– ಆಯಿತು. ಶೂನ್ಯವೇಳೆ ಮುಗಿಯಿತು. ನಿಯಮ 69ರ ಮೇಲೆ ನಡೆದ ಚರ್ಚೆಗೆ ಈಗ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ. ಅದಕ್ಕೂ ಮೊದಲು, Business Advisory Committee ಯಲ್ಲಿ ತೀರ್ಮಾನ ಮಾಡಿದ ಪ್ರಕಾರ ಈಗ ಎಲ್ಲ ಬೇಡಿಕೆಗಳನ್ನು ಸದನದ ಮುಂದೆ ಮಂಡಿಸಬೇಕು.